**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 16/2023</u>**

ದಿನಾಂಕಃ 03.02.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -1 ಅ.ಸಾ -1

| | | |
|---|---|---|
| ಹೆಸರು | ಃ | ಶ್ರೀ. ಗೌಸ್ ಪಾಷ |
| ತಂದೆಯ ಹೆಸರು | ಃ | ಸೈಯದ್ ಕಲಕ್ |
| ವಯಸ್ಸು | ಃ | 73 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ರಾಮನಗರ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಮುಬೀನ ನನ್ನ ಮಗಳು. ಅವಳು ಈಗ ಜೀವಂತ ಇಲ್ಲ. ಆರೋಪಿ ನನ್ನ ಮಗಳ ಗಂಡ. ಮದುವೆ ನಂತರ ನನ್ನ ಮಗಳು ಮತ್ತು ಅಳಿಯ ಬೆಂಗಳೂರಿನ ಶ್ಯಾಮಣ್ಣ ಗಾರ್ಡನ್ ನಲ್ಲಿ ವಾಸ ಇದ್ದರು. ಶಾಹೀನ ನನ್ನ ಚಿಕ್ಕ ಮಗಳು ಇರುತ್ತಾಳೆ. ಆಕೆ ಕೋಲಾರದಲ್ಲಿ ವಾಸ ಇದ್ದಾಳೆ. ನನ್ನ ಅಳಿಯ ಮೊಬೈಲ್ ನಲ್ಲಿ ಏನೋ ನೋಡಿದ್ದರ ಸಂಬಂಧವಾಗಿ ನನ್ನ ಮಗಳ ಜೊತೆ ಚಿಕ್ಕ ಮಗಳ ಮನೆಯಲ್ಲಿ ಗಲಾಟೆ ಮಾಡಿದ್ದರು. ನನ್ನ ಮಗಳು ಈ ಕುರಿತು ಎಲ್ಲಿಗೂ ಹೋಗಿರುವುದಿಲ್ಲ ಮತ್ತು ಹೇಳಿರುವುದಿಲ್ಲ. ನಂತರ ನನ್ನ ಮಗಳು ಮತ್ತು ಅಳಿಯ ರಾಮನಗರಕ್ಕೆ ಬಂದಿದ್ದರು. ಅವರು ರಾಮನಗರದಲ್ಲಿ ಟಿಪ್ಪು ನಗರದ ಕಡೆಯಿಂದ ರಾಮನಗರ ಕಡೆಗೆ ಬರುವಾಗ ಸ್ಮಶಾನದ ಹತ್ತಿರ ಮನೆ

ಮಾಡಿಕೊಂಡು ಇದ್ದರು. ಮನೆ ಮಾಲೀಕರು ನನಗೆ ಗೊತ್ತು, ಅವರ ಹೆಸರು ಈಗ ನನಗೆ ನೆನಪು ಆಗುತ್ತಿಲ್ಲ. ಮನೆಗೆ ಬಂದು ಮೂರು ದಿನ ಆಗಿತ್ತು.

ನನ್ನ ಅಳಿಯ ಬೆಂಗಳೂರಿಗೆ ಆತನ ಚಾಲನೆ ಕೆಲಸಕ್ಕೆ ಹೋಗುತ್ತಿದ್ದ. ನನ್ನ ಮಗಳ ಮನೆಯಲ್ಲಿ ಆಕೆ ಜೊತೆ ಅಳಿಯ ಮತ್ತು ಒಟ್ಟು ಐದು ಮಕ್ಕಳು ಇದ್ದರು. ಮೊದಲನೆಯವನಿಗೆ 13 ವರ್ಷ ಮತ್ತು ಕೊನೆಯವಳು 5 ರಿಂದ 6 ತಿಂಗಳ ಮಗು. ಆಯನ್ ನನ್ನ ಮಗಳ ಮಗ. ಅವನು ನನ್ನ ಮಗಳು ಮತ್ತು ಅಳಿಯನ ಜೊತೆ ಇದ್ದ. ಅವನಿಗೆ 13 ವರ್ಷ ಆಗಿತ್ತು. ಸುಮಾರು ಎರಡು ವರೆ ವರ್ಷಗಳ ಹಿಂದೆ ಉಪವಾಸದ ತಿಂಗಳಿನಲ್ಲಿ 15 ನೇ ತಾರೀಖು ನನ್ನ ಮೊಮ್ಮಗ ಆಯನ್ ಯಾರೋ ಜಬಿ ಎನ್ನುವವರ ಜೊತೆ ನನ್ನ ಬಳಿ ರಾತ್ರಿ 12.30 ಕ್ಕೆ ಬಂದಿದ್ದ. ನನ್ನ ತಂದೆ ನನ್ನ ತಾಯಿಗೆ ಚಾಕು ಹಾಕಿ ಓಡಿ ಹೋದ ಎಂದು ನನ್ನ ಮೊಮ್ಮಗ ಹೇಳಿದ. ನಾನು ನಂತರ ಮಗಳ ಮನೆ ಬಳಿ ಹೋಗಿ ನೋಡಿದೆ. ಅಲ್ಲಿ ಮಗಳಿಗೆ ಚಾಕು ಹಾಕಿತ್ತು. ಮಗಳು ಸತ್ತು ಹೋಗಿದ್ದಳು. ಜೋಯ ನನ್ನ ಮೊಮ್ಮಗಳು. ಆಕೆ ಕೂಡ ನನ್ನ ಮಗಳ ಮನೆಯಲ್ಲಿಯೇ ಇದ್ದಳು. ನನ್ನ ಮೊಮ್ಮಗಳು ಚಾಕು ಚುಚ್ಚಿದ್ದನ್ನು ನೋಡಿ ಕಿರುಚಿಕೊಳ್ಳಲು ಹೋದಾಗ ಆಕೆಯ ಅಪ್ಪ ಬಾಯಿ ಮೇಲೆ ಬೆರಳಿಟ್ಟು ಕಿರುಚಿಕೊಳ್ಳಬೇಡ ಎಂದು ಸನ್ನೆ

ಮಾಡಿದ ನಂತರ ಓಡಿ ಹೋದ ಎಂದು ಹೇಳಿದರು. ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ನನ್ನ ಅಳಿಯ ನೋಡಿದ ವೀಡಿಯೋದಲ್ಲಿ ಇದ್ದವಳು ನನ್ನ ಮಗಳೇ ಎಂದು ಕೊಂಡು ಈ ಕೃತ್ಯ ಮಾಡಿರುತ್ತಾನೆ.

ನಾನು ಹೇಳಿದ್ದನ್ನು ತಯಾರು ಮಾಡಿದ್ದಕ್ಕೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿ ಮಾಹಿತಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಾಹಿತಿ / ದೂರನ್ನು **ನಿಪಿ-1** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-1 ಎ** ಎಂದು ಗುರುತಿಸಲಾಯಿತು. ಪೋಲಿಸರು ನಂತರ ಕೊಲೆಯಾಗಿದ್ದ ಜಾಗಕ್ಕೆ ಬಂದು ಮಹಜರ್ ಮಾಡಿ, ಫೋಟೋಗಳನ್ನು ತೆಗೆದು ಅಲ್ಲಿಂದ 2 ಬೆಡ್ ಶೀಟ್ ತೆಗೆದುಕೊಂಡು ಬಂದಿರುತ್ತಾರೆ. ಪೋಲಿಸರು ಬಂದಾಗ ಬೆಳಗಿನ ಜಾವ 5.00 ಗಂಟೆ ಆಗಿತ್ತು. ಮಹಜರ್ ಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿ ಇರುವ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು **ನಿಪಿ-2** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋ ಒಂದನ್ನು ನೋಡಿ ಗುರುತಿಸಿ ಅದನ್ನು ಮಹಜರ್ ಸಮಯಕ್ಕೆ ತೆಗೆದಿರುವುದಾಗಿ ಮತ್ತು ಅದರಲ್ಲಿ ತಾನು ಇರುವುದಾಗಿ ಹೇಳುತ್ತಿದ್ದಾರೆ. ( ಆರೋಪಿ ವಕೀಲರು

ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ಪ್ರಮಾಣ ಪತ್ರ ಇಲ್ಲದೆ ನಿಶಾನೆ ಗೊಳಿಸಲು ಬರುವುದಿಲ್ಲ ಎಂದು ತಕರಾರು ಸಲ್ಲಿಸಿದ್ದು ತಕರಾರಿಗೆ ಒಳಪಟ್ಟು ನಿಶಾನೆಗೊಳಿಸಿರುತ್ತದೆ.) ಪೋಟೋವನ್ನು **ನಿಪಿ-3** ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ಸಮಯದಲ್ಲಿ ವಶಪಡಿಸಿಕೊಂಡ ಬೆಡ್ ಶೀಟ್ ಗಳು ಎಂದು ಎರಡು ಬೆಡ್ ಶೀಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ಮು.ಮಾ.1 ಮತ್ತು 2** ಎಂದು ಗುರುತಿಸಲಾಯಿತು. ಆರೋಪಿ ನನ್ನ ಅಳಿಯನನ್ನು ನೋಡಿದರೆ ಗುರುತಿಸಬಲ್ಲೆ.

**<u>ಪಾಟೀ ಸವಾಲುಃ ಈ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿ ಸಾಕ್ಷಿ-14 ಮತ್ತು 15 ರವರು ಪ್ರತ್ಯಕ್ಷ ಸಾಕ್ಷಿಗಳಾಗಿದ್ದು ಅವರುಗಳ ಸಾಕ್ಷ್ಯದ ನಂತರ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.